

‘ಕಪ್ ನಮ್ದೇ’ ಎನ್ನುವ ಮಾತು ಭಾರತೀಯ ಕ್ರಿಕೆಟ್‌ನಲ್ಲಿ ಕ್ಲೀಷೆಯಾಗಿಯೂ, ತಮಾಷೆ ಹಾಗೂ ಹತಾಶೆಯ ರೂಪದಲ್ಲಿಯೂ ಬಳಕೆಯಾಗುತ್ತಿರುವ ನುಡಿಗಟ್ಟು. ಆದರೆ, ‘ಕಪ್ ನಮ್ದೇ’ ಎನ್ನುವ ಭಾರತೀಯರ ಆಶಯ ಚದುರಂಗದ ಮಣೆಯಲ್ಲಿ ನನಸಾಗಿದೆ. ಚೆಸ್ ಆಟಗಾರ ಡಿ. ಗುಕೇಶ್ 2024ರ ‘ಕ್ಯಾಂಡಿಡೇಟ್ಸ್ ಟೂರ್ನಿ’ಯಲ್ಲಿ ಕಪ್ ಎತ್ತಿ ಹಿಡಿಯುವುದರೊಂದಿಗೆ ಭಾರತೀಯರ ಹೆಮ್ಮೆಗೆ ಕಾರಣನಾಗಿದ್ದಾನೆ. ಅಷ್ಟು ಮಾತ್ರವಲ್ಲ, ವಿಶ್ವ ಚಾಂಪಿಯನ್ ಆಗುವತ್ತ ದಿಟ್ಟ ಹೆಜ್ಜೆಯನ್ನೂ ಇಡುವ ಮೂಲಕ, ‘ಕಪ್ ನಮ್ದೇ’ ಎನ್ನುವ ಮಾತಿಗೆ ಮತ್ತಷ್ಟು ನಿರೀಕ್ಷೆ ತುಂಬಿದ್ದಾನೆ. ಗುಕೇಶ್ ಸೇರಿದಂತೆ ಭಾರತೀಯ ಯುವ ಚೆಸ್ಸಿಗರ ಇತ್ತೀಚಿನ ಸಾಧನೆ ಬೆರಗು ಹುಟ್ಟಿಸುವಂತಿದೆ. ಉಳಿದ ಕ್ಷೇತ್ರಗಳ ವಿಷಯದಲ್ಲಿ ಅಪೂರ್ಣ ಎನ್ನುವಂತೆ ಕಾಣಿಸುವ ‘ಯುವ ಭಾರತ’ ಎನ್ನುವ ವಿಶೇಷಣ ಚೆಸ್‌ಗೆ ಸಂಬಂಧಿಸಿದಂತೆ ಪೂರ್ಣ ಪ್ರಮಾಣದಲ್ಲಿ ಸಾಕಾರಗೊಂಡಿದೆ.

■ ನಾಗೇಶ ಶೆಣೈ